ಅವರ ಮೊದಲ ಹೆಸರುಗಳಿಂದ ಕರೆಯುವುದೇ ರೂಢಿಯಲ್ಲಿತ್ತು. ಅನೇಕ ಪರಿವಾರಗಳಲ್ಲಿ ವಯಸ್ಸಿಗೆ ಬಂದ ಮಕ್ಕಳು ತಮ್ಮ ತಂದೆ ತಾಯಿಯನ್ನೂ ಅವರ ಮೊದಲ ಹೆಸರಿನಿಂದ ಕರೆಯುತ್ತಾರೆ. ಆದರೆ ನಾನು ಬೆಳೆದ ಸಂಸ್ಕಾರವನ್ನು ಒಮ್ಮೆಲೆ ಕೈಬಿಡಲು ಹೇಗೆ ಸಾಧ್ಯ?

ನನ್ನ ಜೋಶುಆನನ್ನು ಗ್ರೇಥಾ ಪ್ರೀತಿಯಿಂದ ನೋಡುತ್ತಿದ್ದರು. ಅವನ ಕೋಮಲ ಗಲ್ಲಗಳನ್ನು ತಮ್ಮ ಸುಕ್ಕಾಗಿದ್ದ ಕೈಯಿಂದ ನೇವರಿಸುತ್ತಿದ್ದರು. ನನ್ನ ಜೋಶುಆಗೆ ಅವರ ಸ್ವಚ್ಛ ಪ್ರೀತಿ ಸಿಗುವುದನ್ನು ನೋಡಿ ನನಗೆ ಅಪಾರ ಸಂತಸವಾಗುತ್ತಿತ್ತು. ಆದರೆ ನಾವು ಅಲ್ಲಿಂದ ಬೀಳ್ಕೊಂಡು ಹೋಗುವಾಗ, ಲಾರ್ಸ್‌ನ ಕೈಯನ್ನು ಹಿಡಿದು ಗ್ರೇಥಾ ನನಗೆ ಹೇಳಿದರು, 'ಇವನು ನನಗಿರುವ ಏಕಮಾತ್ರ ಮೊಮ್ಮಗ... ಈಗ ಒಬ್ಬ ಮರಿಮಗ ಹುಟ್ಟಲೆಂದು ಬಯಸುತ್ತೇನೆ. ಅವನ ಮುಖ ನೋಡಿ ಸಾಯಬೇಕೆಂದಿದ್ದೇನೆ'.

ನಾನು ಮುಗುಳ್ನಕ್ಕೆ. ನಾನೂ ಮತ್ತೊಮ್ಮೆ ತಾಯಿಯಾಗಲು ಬಯಸುತ್ತಿದ್ದೆ. ನಾನು ಲಾರ್ಸ್ ಮಗುವಿನ ತಾಯಿಯಾಗಲು ಬಯಸುತ್ತಿದ್ದೆ... ಆ ಮಗು ಹೇಗಿರುವುದು...? ನನ್ನ ಜೋಶುಆನ ಬಣ್ಣ ನನಗಿಂತ ಗಾಢವಾಗಿದೆ. ಬಿಸಿಲಿನ ಕಾವಿಗೆ ಇನ್ನಷ್ಟು ಕಪ್ಪಗಾಗಿ ಕಾಣಿಸುತ್ತಾನೆ. ಆದರೆ ಲಾರ್ಸ್‌ನಿಂದ ನನಗೆ ಹುಟ್ಟುವ ಮಗು ಖಂಡಿತ ಬಿಳುಪಾಗಿರುತ್ತದೆ, ಮಗುವಿನ ಕೂದಲು ಸಹ ಶುದ್ಧ ಕಪ್ಪಾಗಿರಲಾರದು, ಕಣ್ಣುಗಳು ಬಹುಶಃ ನೀಲಿಯಾಗಿರಬಹುದು... ಮಗುವಿಗೆ ನೀಲ್ ಎಂದು ಹೆಸರಿಡುತ್ತೇನೆ. ನಾನು ಮುಗುಳ್ನಗುತ್ತಾ ಲಾರ್ಸ್‌ನನ್ನು ನೋಡಿದೆ. ಆದರೆ ಅವನು ಅಜ್ಜಿಯ ಹಿಡಿತದಿಂದ ತನ್ನ ಕೈಯನ್ನು ಬಿಡಿಸಿಕೊಂಡು ದೂರಕ್ಕೆ ಹೊರಟು ಹೋದ. ಅವನ ಮುಖದಲ್ಲಿ ಸಂತಸದ ಭಾವನೆ ಇರಲಿಲ್ಲ.

ಸೋಂಡರಬರ್ಗ್‌ನ ಪ್ರಾಕೃತಿಕ ಸೌಂದರ್ಯ ನನ್ನನ್ನು ತುಂಬಾ ಆಕರ್ಷಿಸಿತು. ನಗರದಿಂದ ದೂರದ ಈ ಶಾಂತ ವಾತಾವರಣದಲ್ಲಿ ಜೀವನದಲ್ಲಿ ನೆಮ್ಮದಿಯಿತ್ತು. ಅಜ್ಜಿಯ ಸುಂದರ, ಸ್ವಚ್ಛ ಆರಾಮದಾಯಕ ಮನೆ. ನನ್ನ ಮನಸ್ಸು ಅಲ್ಲಿಗೆ ಮತ್ತೊಮ್ಮೆ ಹೋಗಲು ಕಾತರಿಸಿತು, ಆದರೆ ಲಾರ್ಸ್ ನನ್ನ ಜೊತೆಗೆ ಬರಲು ಒಪ್ಪಲಿಲ್ಲ. ನನಗೆ ನಗರದ ಕೋಲಾಹಲ ಇಷ್ಟ, ಹಳ್ಳಿಗಳ ನಿಶ್ಶಬ್ದತೆ ಹಿಡಿಸಲ್ಲ ಎಂದ. ಜೋಶುಆನಿಗೂ ಮನಸ್ಸಿಲ್ಲವೆಂದು ಅನ್ನಿಸಿತು. ಈಗ ಕೋಪನ್‌ಹೇಗನ್‌ನಲ್ಲಿ ಅವನಿಗೆ ಕೆಲವರು ಮಿತ್ರರಾಗಿದ್ದರು. ಅವನ ಸಹಪಾಠಿಯೊಬ್ಬ ತನ್ನ ಹುಟ್ಟುಹಬ್ಬದಂದು ಅವನನ್ನು ತನ್ನ ಮನೆಗೆ ಆಹ್ವಾನಿಸಿದ್ದ. ಅವನು ಅಲ್ಲಿಗೆ ಹೋಗಲು ಬಯಸುತ್ತಿದ್ದ. ಲಾರ್ಸ್ ನನಗೆ, 'ನೀನು ಜೋಶುಆನನ್ನು ಕೋಪನ್‌ಹೇಗನ್‌ನಲ್ಲಿ ಅವನ ಮಿತ್ರನ ಹತ್ತಿರ ಬಿಟ್ಟು ಒಂಟಿಯಾಗಿ ಸೋಂಡರಬರ್ಗ್‌ಗೆ ಹೋಗಬಹುದು. ನಾನು ಅವನನ್ನು ಮಿತ್ರನ ಬರ್ತಡೇ ಪಾರ್ಟಿಗೆ ಬಿಟ್ಟು ಬರುತ್ತೇನೆ, ಆಮೇಲೆ ಕರೆದುಕೊಂಡು ಬರುವುದಕ್ಕೂ ಹೋಗ್ತೀನಿ' ಎಂದ.

ನನಗೆ ತುಂಬಾ ಖುಷಿಯಾಯಿತು. ನನ್ನ ಕಣ್ಣುಗಳು ಭಾವುಕವಾದವು. ದೇವರು ನನಗೆ ಬಹಳಷ್ಟು ಸಂತಸವನ್ನು ಕರುಣಿಸಿದ್ದಾನೆ, ಇದನ್ನೆಲ್ಲಾ ಹೇಗೆ ಸಂಭಾಳಿಸಲಿ!

ನಾನು ನನ್ನ ಸಹೋದ್ಯೋಗಿ ರೀಮ್‌ಳೊಂದಿಗೆ ಸೋಂಡರ್‌ಬರ್ಗ್‌ಗೆ ಹೋಗುವ ಕಾರ್ಯಕ್ರಮ ಹಾಕಿಕೊಂಡೆ. ನಾವಿಬ್ಬರು ಒಟ್ಟಿಗೆ ಶಾಲೆಗೆ ಜಾಯಿನ್ ಆಗಿದ್ದೆವು. ಅವಳು ಮೂಲದಲ್ಲಿ ಈಜಿಪ್ಟಿಯನ್ ಆಗಿದ್ದಳು, ಆದರೆ ಆಸ್ಟ್ರೇಲಿಯಾದಲ್ಲಿ ಬೆಳೆದಿದ್ದಳು. ಅವಳು ಆಸ್ಟ್ರೇಲಿಯಾದಲ್ಲಿದ್ದಾಗ ಅಲ್ಲಿ ಅವಳಿಗೆ ಕೆಲವು ಇಂಡಿಯನ್ ಗೆಳತಿಯರಿದ್ದರು. ಅವರೊಂದಿಗೆ ಅವಳು ಭಾರತಕ್ಕೆ ಹೋಗಿ ಬಂದಿದ್ದಳು. ಹೀಗಾಗಿ ರೀಮ್‌ಳೊಂದಿಗೆ ನನ್ನ ಗೆಳೆತನ ಗಟ್ಟಿಯಾಗಿತ್ತು.

ಅವಳೂ ಸಹ ಡೆನ್ಮಾರ್ಕ್‌ನ ಇತರೆ ನಗರಗಳನ್ನು ನೋಡಲು ಬಯಸುತ್ತಿದ್ದಳು. ನಾನು ಲಾರಾಗೆ, ನಾನು ನನ್ನ ಗೆಳತಿಯೊಂದಿಗೆ ಸೋಂಡರ್‌ಬರ್ಗ್‌ಗೆ ಬರುತ್ತಿದ್ದೇನೆ ಎಂದು ಫೋನ್ ಮಾಡಿದೆ. ಅವರು, 'ನಾನು ನನ್ನ ತಾಯಿಯನ್ನು ಈ ಬಗ್ಗೆ ಅಂದರೆ ನಾನು ನನ್ನ ಗೆಳತಿಯೊಂದಿಗೆ ಅವರ ಮನೆಯಲ್ಲಿರಬಹುದೇ? ಎಂದು ಕೇಳಬೇಕು' ಎಂದರು.

'ನಾನು ಹೆಚ್ಚು ಡಿಮ್ಯಾಂಡ್ ಮಾಡುತ್ತಿರುವೆನೇ?' ನನಗೆ ಸ್ವಲ್ಪ ಆಶ್ಚರ್ಯವಾಯಿತು, ಏಕೆಂದರೆ ತಾಯಿಯ ಮನೆಯನ್ನು ಲಾರಾರೇ ನಡೆಸುತ್ತಿದ್ದರು. ತಾಯಿಯ ಮನೆಯನ್ನು ಅವರು ಕಡಿಮೆ ಬೆಲೆಗೆ ಖರೀದಿಸಿದ್ದರು; ತಾಯಿ ಬದುಕಿರುವವರೆಗೆ ಆ ಮನೆ ತಾಯಿಗೇ ಸೇರುತ್ತೆ, ತಾಯಿ ಸತ್ತ ನಂತರ ಮನೆ ಲಾರಾರಿಗೆ ಸೇರುತ್ತೆ ಎಂಬ ನಿಬಂಧನೆಯ ಮೇರೆಗೆ ಮನೆಯನ್ನು ಖರೀದಿಸಲಾಗಿತ್ತು.

'ನಿಮಗೆ ತಾಯಿಯ ಮನೆಯನ್ನು ಖರೀದಿಸುವ ಅಗತ್ಯ ಏಕಾಯಿತು? ಆ ಮನೆ ಅವರು ಹೋದ ನಂತರ ನಿಮ್ಮದೇ ಆಗುತ್ತಿತ್ತಲ್ಲ?'

'ಸರ್ಕಾರ ತಂದೆ ತಾಯಿಯಿಂದ ಸಿಕ್ಕಿದ ಸಂಪತ್ತಿಗೂ ಸಿಕ್ಕಾಪಟ್ಟೆ ಟ್ಯಾಕ್ಸ್ ಹಾಕುತ್ತೆ. ಅದಕ್ಕಿಂತ ಅವರಿಂದ ಮನೆಯನ್ನು ಖರೀದಿಸಿದರೆ, ಅದು ತುಂಬಾ ಅಗ್ಗವಾಗುತ್ತೆ'.

'ಈ ಬಗ್ಗೆ ನಿಮ್ಮ ಸಹೋದರರ ತಕರಾರು ಇಲ್ವ?'

'ಅವನು ಸದಾ ಸಾಲದಲ್ಲಿ ಮುಳುಗಿರುತ್ತಾನೆ... ಅವನು ಒಂದಲ್ಲ ಒಂದು ಬ್ಯಾಂಕ್ ಲೋನ್‌ನಿಂದ ಒದ್ದಾಡ್ತಿರ್ತಾನೆ. ಅವನ ಹೆಸರಿಗೆ ಮನೆಯೋ, ಜಮೀನೋ ಇದ್ದರೆ ಸರ್ಕಾರ ತಕ್ಷಣ ಅದನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೆ. ಅವನಿಗೂ ಇದು ಗೊತ್ತಿದೆ, ಅದಕ್ಕೇ ಅವನೇನೂ ಹೇಳಲ್ಲ'.

ನನಗೆ ಈ ವಿಷಯಗಳೆಲ್ಲವೂ ತುಂಬಾ ವಿಚಿತ್ರವಾಗಿ ಕಂಡಿತು.

ಸರಿ, ನಾನು ನನ್ನ ಗೆಳತಿಯೊಂದಿಗೆ ವಾರದ ಕೊನೆಯಲ್ಲಿ ಅವರ ಮನೆಗೆ ಬರಬಹುದು ಎಂದು ಗ್ರೇಥಾ ನನಗೆ ಅನುಮತಿಯಿತ್ತರು. ಒಂದು ಬೆಳಿಗ್ಗೆ ನಾನು ರೀಮ್‌ಳೊಂದಿಗೆ ಕೋಪನ್‌ಹೇಗನ್ ಸೆಂಟ್ರಲ್ ಸ್ಟೇಷನ್‌ನಿಂದ ಸೋಂಡರ್‌ಬರ್ಗ್‌ಗೆ ಹೊರಟೆ.

ರೀಮ್ ನನಗಿಂತ ಮೂರು ವರ್ಷ ಚಿಕ್ಕವಳಾಗಿದ್ದಳು, ಅವಿವಾಹಿತಳಾಗಿದ್ದ ಅವಳು ಒಂಟಿಯಾಗಿದ್ದಳು. ಅವಳೊಂದಿಗಿದ್ದಾಗ ನಾನೂ ಸಹ ನನ್ನ ಹಿಂದಿನ ದಿನಗಳಿಗೆ ಮರಳಿ ಹೋಗುತ್ತಿದ್ದೆ, ಆಗ ನಾನು ಅವಿವಾಹಿತೆಯಾದ ಯುವತಿಯಾಗಿದ್ದೆ; ಆಗ ನನ್ನಲ್ಲಿ ಅತೀವ ಉತ್ಸಾಹವಿತ್ತು.

ನನ್ನ ಮನಸ್ಸು ಸಹ ನಿಶ್ಚಿಂತೆಯಿಂದಿತ್ತು. ನನ್ನ ಮನಸ್ಸಿನಲ್ಲಿ ಹತ್ತಿಕ್ಕಲಾಗಿದ್ದ ಚಂಚಲತೆ ಹೊರ ಹೊಮ್ಮಿತು. ಜೀವನದ ಪ್ರತಿ ಕ್ಷಣವೂ ಮಜವಾಗಿರುತ್ತದೆ... ನಾನು ರೀಮ್‌ಳೊಂದಿಗೆ ಸೋಂಡರ್‌ಬರ್ಗ್ ಸಮೀಪದ ನಗರಗಳಲ್ಲಿ ಸುತ್ತಾಡಿದೆ, ರೀಬ್ ಮತ್ತು ಕೋಲ್ಡಿಂಗ್‌ಗೂ ಹೋದೆ. ಜರ್ಮನಿಯ ಗಡಿಯೊಳಗೆ ಬರುವ ನಗರ ಕೀಲ್, ಲ್ಯುಬೆಕ್, ಹೆಂಬರ್ಗ್‌ವರೆಗೂ ಹೋಗಿ ಬಂದೆ. ಮನಸಾರೆ ಖುಷಿಗೊಂಡೆ. ಕಿರುದಾರಿಗಳಲ್ಲಿ ಸೈಕಲ್‌ನಲ್ಲಿ ಪ್ರಯಾಣಿಸಿದೆ. ನೃತ್ಯಿಸಿದೆ, ಹಾಡಿದೆ. ತಿಂದೆ–ಕುಡಿದೆ. ಟ್ಯಾಟೂ ಹಾಕಿಸಿಕೊಂಡೆ.

ಲಾರ್ಸ್‌ನ ಅಜ್ಜಿ ಈ ಬಾರಿ ಮತ್ತೆ ನನಗೆ ಮಗುವಿನ ಬಗ್ಗೆ ವಿಚಾರಿಸಿ, 'ನನ್ನ ಮರಿಮಗನನ್ನು ನೋಡದೆ ಈ ಜಗತ್ತಿನಿಂದ ಹೋಗಲು ಬಯಸುವುದಿಲ್ಲ' ಎಂದರು.

ಲಾರ್ಸ್‌ನ ಅಜ್ಜಿಯ ಈ ಹಟ ನನಗೆ ಇಷ್ಟವಾಗುತ್ತಿತ್ತು. ಮನೆಯಂಗಳದಲ್ಲಿ ಪುಟ್ಟ ಮಗುವಿನ ಕಿಲಕಿಲ ನಗುವನ್ನು ಕೇಳಲು ನಾನೂ ಹಾತೊರೆಯುತ್ತಿದ್ದೆ. ನಾನು ಅವರಿಗೆ, 'ನಾವು ಪ್ರಯತ್ನ ಮಾಡ್ತಿದ್ದೀವಿ. ದೇವರು ಬಯಸಿದರೆ ನಿಮ್ಮಾಸೆ ಶೀಘ್ರವೇ ಈಡೇರಬಹುದು. ಈಗ್ಲೇ ಹೆಸರನ್ನು ಯೋಚಿಸಿದ್ದೇನೆ' ಎಂದೆ.

'ಯಾವ ಹೆಸರನ್ನು ಯೋಚಿಸಿದ್ದೀಯ?' ಲಾರಾ ಮತ್ತು ಗ್ರೇಥಾ ಇಬ್ಬರೂ ನನ್ನನ್ನು ಉತ್ಸುಕತೆಯಿಂದ ಕೇಳಿದರು.

'ಹುಡುಗನಾದರೆ ನೀಲ್, ಹುಡುಗಿಯಾದರೆ ನೀಲಾ...' ನಾನು ಮುಗುಳ್ನಕ್ಕೆ.

'ಎರಡು ಹೆಸರೂ ಚೆನ್ನಾಗಿವೆ. ಡ್ಯಾನಿಶ್‌ನಲ್ಲೂ ಈ ಹೆಸರುಗಳಿವೆ,' ಎಂದರು ಅವರು.

***

ನಾನು ಯೂರೋಪಿನಲ್ಲಿ ವಾಸಿಸುತ್ತಿದ್ದು, ಸ್ಕ್ಯಾಂಡಿನೇವಿಯನ್ ಲೈಫ್‌ಸ್ಟೈಲ್‌ನಲ್ಲಿ ಮುಳುಗೇಳುತ್ತಿದ್ದೆ. ನೌಕರಿ ನನ್ನನ್ನು ಒಂದು ಶಿಸ್ತಿನ ದಿನಚರ್ಯೆಯಲ್ಲಿ ಕಟ್ಟಿ ಹಾಕಿತ್ತು. ನಾನು ಮತ್ತು ಜೋಶ್ ಒಟ್ಟಿಗೆ ಶಾಲೆಗೆ ಹೋಗುತ್ತಿದ್ದೆವು, ಒಟ್ಟಿಗೆ ಮನೆಗೆ ಬರುತ್ತಿದ್ದೆವು. ಶಾಲೆಯಲ್ಲಿ ಅವನು ಕಾರಿಡಾರ್‌ನಿಂದ ಹಾದು ಹೋಗುವಾಗ ಅಥವಾ ಆಟದ ಬಯಲಿನಲ್ಲಿ ಆಡುವಾಗ ಕಾಣಬರುತ್ತಿದ್ದ. ಮಗ ನನ್ನ ಬಳಿ ಇಷ್ಟು ಸಮೀಪದಲ್ಲಿರುವುದು ನನಗೆ ತುಂಬಾ ಹಿತವೆನಿಸುತ್ತಿತ್ತು. ಒಟ್ಟಿಗೆ ಶಾಲೆಗೆ ಹೋಗಿ, ಒಟ್ಟಿಗೆ ಮನೆಗೆ ಬರುತ್ತಿದ್ದೆವು; ಇಬ್ಬರೂ ಸೇರಿ ಶಾಲೆಯ ಅನೇಕ ವಿಷಯಗಳ ಬಗ್ಗೆ ಮಾತನಾಡುತ್ತಿದ್ದೆವು. ಒಮ್ಮೊಮ್ಮೆ ಜೋಶುಆ ನಾನು ಶಾಲೆಯಲ್ಲಿರುವಾಗ ನನ್ನ ಸಮೀಪಕ್ಕೆ ಬಂದು ನನ್ನನ್ನು ತಬ್ಬಿಕೊಳ್ಳುತ್ತಿದ್ದ. ನಾನು ಅವನನ್ನು ಪ್ರತ್ಯೇಕಿಸುತ್ತಾ ಹೇಳುತ್ತಿದ್ದೆ, 'ಐ ಲವ್ ಯೂ! ಆದರೆ ನೀನೀಗ ಶಾಲೆಯಲ್ಲಿದ್ದೀಯ, ನಾನು ಡ್ಯೂಟಿಯಲ್ಲಿದ್ದೇನೆ. ನೀನು ಇಲ್ಲಿ ನಾಲ್ಕನೆಯ ತರಗತಿಯ ವಿದ್ಯಾರ್ಥಿ ಜೋಶುಆ, ನಾನು ಟೀಚರ್ ನ್ಯಾನ್ಸಿಯಾಗಿದ್ದೇನೆ'.

(ಸಶೇಷ)